


## "ಪತ್ರಿಕಾ ಪ್ರಕಟಣೆಗಾಗಿ"

## ನಮಸ್ತುಭ್ಯಮ್ – ಯುವ ಸಾವಿಷ್ಕಾರ ಸಂಗೀತೋತ್ಸವ 2021

## ಮಾರ್ಚ್ 27 – 28, 2021 ಚೌಡಯ್ಯ ಸ್ಮಾರಕ ಭವನ, ಬೆಂಗಳೂರು

ಭಾರತೀಯ ಸಾಂಪ್ರದಾಯಕ ಸಂಗೀತವನ್ನು ಬಹುಜನರ ಮೆಚ್ಚುಗೆ, ತಿಳುವಳಿಕೆ ಹಾಗು ಪ್ರೇಮಾದರಗಳನ್ನು ಗಳಿಸುವ ಸಲುವಾಗಿ ಭಾರತೀಯ ಸಾಮಗಾನ ಸಭಾಯು ಮುಂದಾಗಿದೆ. ಕಳೆದ ಸುಮಾರು 11 ವರ್ಷಗಳಿಂದ ಸಂಗೀತದಂತೆ ಸುಂದರ ಹಾಗು ದೈವಿಕವಾದ ಈ ಪ್ರಯತ್ನದಲ್ಲಿ ತೊಡಗಿಸಿಕೊಂಡಿದೆ. 2021 ರ ಈಗಿನ ಏರ್ಪಾಡು ಮುಂದುವರಿದ ಪ್ರಯತ್ನವಾಗಿದೆ.

**"ನಮಸ್ತುಭ್ಯಮ್ – ನಿನಗೆ ನಮಸ್ಕಾರ" ಎಂಬುದು ದೇವತೆಯನ್ನೊ ಗುರುವನ್ನೊ ಅಥವಾ ಹಿರೀಕನನ್ನೊ ಕುರಿತಾಗಿ ವಿಸ್ಕೃತ ಅರ್ಥಾಭಿವ್ಯಕ್ತಿಯುಳ್ಳದ್ದಾಗಿದೆ.**

ನಮ್ಮದು ಅವಿಚ್ಛಿನ್ನ ಜ್ಞಾನ ಪರಂಪರೆಯ ದೇಶವಾಗಿರುವುದರಿಂದ ಪ್ರತಿಯೊಂದು ಚ್ಚರಿಯಲ್ಲಿಯೂ ಆಳವಾದ ಅರ್ಥರೂಪವು ಅಡಕವಾಗಿರುತ್ತದೆ. ಕೈಜೋಡಣೆಯು ಎದುರಿಗಿರುವ ವ್ಯಕ್ತಿಯ ಸ್ಥಾನವನ್ನು ಸೂಚಿಸುತ್ತದೆ. ದೈವ ಗುರು ಮೂರ್ತಿಗಳನ್ನು ಅಭಿವಂದಿಸುವಾಗ ಎರಡು ಕೈಗಳನ್ನು ಶಿರಾಗ್ರದಲ್ಲಿಯ ಸಹಾಸ್ರಾರ – (ಚಕ್ರ) ಸ್ಥಾನದಲ್ಲಿರಿಸುವುದು ಅಗತ್ಯ; ಇನ್ನು ಗೌರವಾದರಗಳಿಂದ ಎರಡು ಹುಬ್ಬುಗಳ ನಡುವಿನ ಸ್ಥಳದಲ್ಲಿ ಅಂದರೆ ಗುರುದ್ವಾರವೆನಿಸುವ ಆಜ್ಞಾ ಚಕ್ರದಲ್ಲಿ ಕೈಗಳನ್ನಿಟ್ಟಾಗ ಜ್ಞಾನ – ವಿಚಾರ ತರಂಗಗಳು ಹರಿಯುತ್ತವೆ. ಸ್ನೇಹಿತನನ್ನು ಬರಮಾಡಿಕೊಳ್ಳುವಾಗ ಪ್ರೇಮಕರುಣೆಗಳ ಹೃದ್ದೇಶದ ಅನಾಹತ (ಚಕ್ರ) ನೆಲೆಯಲ್ಲಿ ಕೈಗಳನ್ನಿರಿಸಬೇಕು.

......2

**ಶಾಸ್ತ್ರೀಯ ಸಂಗೀತ ಪ್ರಕಾರದಲ್ಲಿ ಪ್ರತಿಭಾನ್ವೇಷಣೆ**

ಸಂಗೀತ ಪ್ರತಿಭೆಯೆಂಬುದು ಆರಂಭಿಕ ಹಂತದಲ್ಲಿ ಗೋಚರವಾಗಿ ಸಮರ್ಥ ಬೆಳವಣಿಗೆ ಮೂಲಕ ಪ್ರರೂಢವಾಗುತ್ತದೆ. ಅಂದರೆ ಪ್ರತಿಭೆಯು ವ್ಯಕ್ತಿಯ ಆಂತರಿಕ ಗುಣವಾಗಿದ್ದು ಇದರೊಂದಿಗೆ ನಿರಂತರ ಕಲಿಕೆ – ಅಭ್ಯಾಸಗಳು ಸೇರಿದಾಗ ಸಾಮರ್ಥ್ಯವು ಅಥವಾ ಕಾರ್ಯಕ್ರಮತೆಯು ಹೆಚ್ಚುವಂತಹದಾಗುತ್ತದೆ. ಶ್ರೋತ್ರವಿಗೂ, ಸಹೃದಯನಿಗೂ ಅನುಭವಕ್ಕೆ ಬರುವ ಪ್ರಯೋಗಾಧಾರಿತ ಪರಿಮಿತಿಯುಳ್ಳದ್ದಾಗಿರುತ್ತದೆ. ಇದಕ್ಕೆ ವೈಚಾರಿಕತೆ, ವಿಶೇಷ ಪರಿಣತಿ, ಬಾಲ್ಯದ ವಾತಾವರಣ, ಪೋಷಕರ ಪ್ರೋತ್ಸಾಹ, ಗುರುಶಿಷ್ಯ ಸಂಬಂಧ, ಬೋಧಶಕ್ತಿ, ಬೋಧ್ಯಾರನ ಗ್ರಹಿಕೆ, ಬಾಹ್ಯ ಉತ್ತೇಜನ, ಆಗ್ರಹ – ಉತ್ಸುಕತೆಗಳು, ವರ್ಚಸ್ಸು ... ಇತ್ಯಾದಿಗಳು ಸಹಕಾರಿಯಾಗಿರುತ್ತದೆ.

ಭಾರತೀಯ ಸಾಮಗಾನ ಸಭೆಯು, ಅತ್ಯಂತ ಪ್ರತಿಭಾನ್ವಿತ ಯುವ ಕಲಾವಿದರನ್ನು ಈ ವರ್ಷದ ಸಂಗೀತ ಉತ್ಸವಕ್ಕೆ ಆಹ್ವಾನಿಸಿದೆ. ಈ ಅಪರೂಪದ ಪ್ರತಿಭೆಗಳು ನಮ್ಮ ದೇಶಕ್ಕೆ ಕೀರ್ತಿ ತರುವಂತವರು. ಈ ಪ್ರತಿಷ್ಠಿತ ವೇದಿಕೆಯಲ್ಲಿ ಭಾಗವಹಿಸುವವರು **ಕುಮಾರ ರಾಹುಲ್ ವೆಳ್ಳಲ್, ಕುಮಾರಿ ನಂದಿನಿ ಗಾಯಕವಾಡ್, ಕುಮಾರಿ ಉತ್ತರ ಉನ್ನಿಕೃಷ್ಣನ್ ಮತ್ತು ಕುಮಾರಿ ಸ್ಫೂರ್ತಿ ರಾವ್.**

**ಡೋನರ್ ಪಾಸುಗಳಿಗೆ :**

**ಚೌಡಯ್ಯ ಸ್ಮಾರಕ ಭವನ : ಬುಕ್‌ಮೈಶೋ : https://cutt.ly/5zsyVh1**

**ಆನ್‌ಲೈನ್ ನೇರ ವೀಕ್ಷಣೆ : ಶಾಲೆ.ಕಾಂ : https://shaale.com/watch/talent**

**ಪ್ರೆಸ್ ನೋಟ್ ಸಾಫ್ಟ್ ಕಾಪಿಗೆ :**

**http://www.bharatiyasamagana.com/media-kit/**

ಆರ್. ಆರ್.ರವಿಶಂಕರ್

ಛೇರ್ಮನ್ ಮತ್ತು ಮ್ಯಾನೇಜಿಂಗ್ ಟ್ರಸ್ಟೀ

ಭಾರತೀಯ ಸಾಮಗಾನ ಸಭಾ (ರಿ.)

ಬೆಂಗಳೂರು .

# <u>ನಮಸ್ತುಭ್ಯಮ್ – ಕಾರ್ಯಕ್ರಮ ವಿವರಣೆ</u>

**ಮಾರ್ಚ್ 27, 2021**

| ಸಮಯ | ಕಾರ್ಯಕ್ರಮ | ವಿವರಣೆ |
|---|---|---|
| **ಸಂಜೆ 5.15 ಕ್ಕೆ** | **ಉದ್ಘಾಟನೆ** | |
| **ಸಂಜೆ 6.00 ಕ್ಕೆ** | **ರಾಹುಲ್ ವೆಲ್ಲಾಳ್** | **ಕರ್ನಾಟಕ ಹಾಡುಗಾರಿಕೆ** |
| | ವೈಭವ್ ರಮಣಿ | ಪಿಟೀಲು |
| | ಅದಮ್ಯ ರಮಾನಂದ | ಮೃದಂಗ |
| **ಸಂಜೆ 7.15 ಕ್ಕೆ** | **ನಂದಿನಿ ಗಾಯಕ್ವಾಡ್** | **ಹಿಂದೂಸ್ತಾನಿ ಹಾಡುಗಾರಿಕೆ** |
| | ರೂಪಕ್ ವೈದ್ಯ | ತಬಲ |
| | ತೇಜಸ್ ಕಟೋಟಿ | ಹಾರ್ಮೋನಿಯಂ |

**ಮಾರ್ಚ್ 28, 2021**

| ಸಮಯ | ಕಾರ್ಯಕ್ರಮ | ವಿವರಣೆ |
|---|---|---|
| **ಸಂಜೆ 6.00 ಕ್ಕೆ** | **ಉತ್ತರ ಉನ್ನಿಕೃಷ್ಣನ್** | **ಕರ್ನಾಟಕ ಭಕ್ತಿ ಹಾಡುಗಾರಿಕೆ** |
| | ಸಾಯಿ ರಕ್ಷಿತ್ | ಪಿಟೀಲು |
| | ಸುಮೇಶ್ ನಾರಾಯಣನ್ | ಮೃದಂಗ |
| | ರವಿಶಂಕರ್ | ಕೀಬೋರ್ಡ್ |
| **ಸಂಜೆ 7.15 ಕ್ಕೆ** | **ಸ್ಫೂರ್ತಿ ರಾವ್** | **ಕರ್ನಾಟಕ ಹಾಡುಗಾರಿಕೆ** |
| | ದೀಪಿಕಾ | ಪಿಟೀಲು |
| | ಅಕ್ಷಯ್ ಆನಂದ್ | ಮೃದಂಗ |

# ಕಲಾವಿದರ ಪರಿಚಯ

ಮಾರ್ಚ್ 27, 2021 ಸಂಜೆ 6:00 ಕ್ಕೆ ರಾಹುಲ್ ವೆಲ್ಲಾಳ್ (ಕರ್ನಾಟಕ ಹಾಡುಗಾರಿಕೆ)

ರಾಹುಲ್ ಬೆಂಗಳೂರಿನ ಓರ್ವ ಬಾಲ ಪ್ರತಿಭೆ. ಅವರ ವೀಡಿಯೋಗಳಿಗೆ ವಿಶ್ವದಾದ್ಯಂತ ಪ್ರಶಂಸೆಗಳು ಬಂದಿವೆ. ಅವರು ಹಾಡುಗಳು ಮತ್ತು ಸುಮಧುರ ಧ್ವನಿಯೊಂದಿಗೆ ಯು-ಟ್ಯೂಬಿನಲ್ಲಿ ಶ್ರೇಷ್ಠ ಗಾಯಕನೆನಿಸಿದ್ದಾರೆ. ಅವರ ಒಂದು ವೀಡಿಯೋ 66 ಲಕ್ಷಕ್ಕೂ ಮಿಗಿಲಾಗಿ ವೀಕ್ಷಣೆ ಹೊಂದಿದೆ.

ಮಾರ್ಚ್ 27, 2021 ಸಂಜೆ 7:15 ಕ್ಕೆ ನಂದಿನ ಗಾಯಕ್ವಾಡ್ (ಹಿಂದೂಸ್ತಾನಿ ಹಾಡುಗಾರಿಕೆ)

ನಂದಿನಿ ಗಾಯಕ್ವಾಡ್ ಓರ್ವ ಭಾರತೀಯ ಸಂಗೀತ ಕಲಾವಿದೆ. ಹಾಡುವ ರಿಯಾಲಿಟಿ ಶೋ ಸಾ ರೇ ಗಾ ಮಾಪಾ ಲಿಟಲ್ ಚಾಂಪ್ಸ್ 18 ಮತ್ತು ಸಂಗೀತ ಸಾಮ್ರಾಟ್‌ನಲ್ಲಿ ಸ್ಪರ್ಧಿಸಿದ ನಂತರ ಅವರು ಎಲ್ಲರ ಗಮನ ಸೆಳೆದರು.  2018 ರಲ್ಲಿ ಅವರು ಕ್ಲಾಸಿಕಲ್ ವಾಯ್ಸ್ ಆಫ್ ಇಂಡಿಯಾದಿಂದ ಚಿನ್ನದ ಪದಕವನ್ನು ಪಡೆದರು.

ಮಾರ್ಚ್ 28, 2021 ಸಂಜೆ 6:00 ಕ್ಕೆ ಉತ್ತರ ಉನ್ನಿಕೃಷ್ಣನ್ (ಕರ್ನಾಟಕ ಭಕ್ತಿ ಹಾಡುಗಾರಿಕೆ)

ಉತ್ತರಾ ಉನ್ನಿಕೃಷ್ಣನ್ ಅವರು ಕರ್ನಾಟಕ ಶಾಸ್ತ್ರೀಯ ಗಾಯಕ ಪಿ. ಉನ್ನಿಕೃಷ್ಣನ್ ಮತ್ತು ಭರತನಾಟ್ಯ ನರ್ತಕಿ ಪ್ರಿಯಾ ಉನ್ನಿಕೃಷ್ಣನ್ ಅವರ ಪುತ್ರಿ.  ಅವರು "ಅಳಗೆ" ಎಂಬ ಹಾಡನ್ನು ಹಾಡಿ ರಾಷ್ಟ್ರೀಯ ಚಲನಚಿತ್ರ ಮಹಿಳಾ ಹಿನ್ನೆಲೆ ಗಾಯಕಿ ಪ್ರಶಸ್ತಿಯು ಲಭಿಸಿತು. ಅವರು 7 ವರ್ಷದವಳಿದ್ದಾಗ ಈ ಹಾಡನ್ನು ಧ್ವನಿ ಮುದ್ರಿಸಿದ್ದರು. ಅವರು ತಮ್ಮ 10ನೇ ವಯಸ್ಸಿನಲ್ಲಿ ಪ್ರಶಸ್ತಿಯನ್ನು ಪಡೆದು, ಅತಿ ಕಿರಿಯರೆನಿಸಿದರು. ಉತ್ತರಾ ಇಂಟರ್ನೆಟ್ ಜಾಲತಾಣದಲ್ಲಿ ಸುಪ್ರಸಿದ್ಧರಾಗಿದ್ದು ಮತ್ತು ಅವರ ಕರ್ನಾಟಿಕ್ ಯೂಟ್ಯೂಬ್ ಹಾಡುಗಳು ಬಹಳ ಜನಪ್ರಿಯವಾಗಿವೆ.

ಮಾರ್ಚ್ 28, 2021 ಸಂಜೆ 7:15 ಕ್ಕೆ ಸ್ಪೂರ್ತಿ ರಾವ್ (ಕರ್ನಾಟಕ ಹಾಡುಗಾರಿಕೆ)

ಸ್ಪೂರ್ತಿ ರಾವ್, ಪ್ರಖ್ಯಾತಿಗೆ ಬರುತಿರುವ ಯುವ ಕರ್ನಾಟಕ ಗಾಯಕಿ. ಏರ್‌ಟೆಲ್ ಸೂಪರ್ ಸಿಂಗರ್ ಜೂನಿಯರ್ 4 ವಿಜೇತೆ – (ವಿಜಯ್ ಟಿವಿಯ ಸಂಗೀತ ರಿಯಾಲಿಟಿ ಶೋ) ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಕ್ರಮವನ್ನು ನೀಡಿರುವರು. ಎಸ್.ಪಿ. ಬಾಲಸುಬ್ರಮಣ್ಯಂ, ಶಂಕರ್ ಮಹಾದೇವನ್, ಕೆ.ಎಸ್. ಚಿತ್ರ, ವಿಜಯ್ ಪ್ರಕಾಶ್ ಮತ್ತು ಇತರ ಅನೇಕ ಪ್ರಸಿದ್ಧರೊಂದಿಗೆ ಕೆನಡಾ, ಆಸ್ಟ್ರೇಲಿಯಾ, ವೆಂಬ್ಲಿ ಅರೆನಾ-ಲಂಡನ್, ಸಿಂಗಾಪುರದಲ್ಲಿ ಪ್ರವಾಸಗಳನ್ನು ಕೈಗೊಂಡಿದ್ದಾರೆ. ಪ್ರತಿಷ್ಠಿತ ಸಭೆಗಳು ಮತ್ತು ವೇದಿಕೆಗಳಲ್ಲಿ ಕರ್ನಾಟಕ ಸಂಗೀತ ಕಾರ್ಯಕ್ರಮಗಳನ್ನು ನಡೆಸುವ ಅವಕಾಶಗಳನ್ನು ಅವರು ಈಗಾಗಲೇ ಒದಗಿಸಿಕೊಂಡಿರುತ್ತಾರೆ.